
ಪದಬಂಧ



**ಎಡದಿಂದ ಬಲಕ್ಕೆ**

1. ಆತುರದ ಕೆಲಸಕ್ಕೆ ಸಿಲುಕಿದವರೇ ಅತ್ಯಂತ ಹೆಚ್ಚು 4
3. ಹೊಸ ವಾಹನ ಬಳಸುವ ಮೊದಲು ಹೀಗೊಂದು ಹೋಮಕಾರ್ಯ 3
4. ಪತಿಯನ್ನು ದೈವ ಸಮಾನವೆಂದು ಭಾವಿಸುವುದು ಆ ಜನರ ಸಂಪ್ರದಾಯ 3
6. ಪಾಟೀಲರ ಮನೆಯಲ್ಲಿ ಅದೇನೋ ಲಾಠಿ ಹಿಡಿದು ಪಟ ಪಟ ಹೊಡೆದಾಟ 4
7. ತುಳಿತದಿಂದ ಪಾರಾದವರು ಇದ್ದ ಜಾಗವೇ ಆ ಪ್ರದೇಶದ ಅತ್ಯಂತ ಕೊನೆ 4
9. ಆಶಾಪಾಶಕ್ಕೆ ಸಿಕ್ಕಿದವರೆಲ್ಲ ಇಲ್ಲೇ ಇದ್ದಾರೆ ಅಕ್ಕಪಕ್ಕ 4
11. ಆತ ಎಲ್ಲರಿಗೂ ಕಳುಹಿಸಿರುವುದು ಇದೇ ಮರದಿಂದ ಬಿದ್ದ ಒಣ ತೆಂಗು 4
13. ಜಾಯಮಾನದಿಂದಲೇ ಆತನೇ ಆ ಗುಂಪಿನ ಮುಖ್ಯಸ್ಥ 4
15. ಅರ್ಧ ಭಾಗವನ್ನ ಹಂಚಿ ಮುಗಿಸುವುದರೊಳಗೇ ಮತ್ತರ್ಧ ಕಣ್ಮರೆ 4
17. ಮುರುಗನ ವಿಗ್ರಹದಲ್ಲಿ ಅದೆಂಥ ಹೊಳಪು ನೋಡಿ! 3
18. ಸ್ನೇಹಿತರನ್ನೆಲ್ಲ ಕರೆ ತರಲು ಏಕೆ ಇಷ್ಟು ಅವಸರ? 3
19. ಅಲಕ್ಷಿತರ ಸಂಖ್ಯೆ ಆ ದೇಶದಲ್ಲಿ ನೂರಾರು ಸಾವಿರ 4

**ಮೇಲಿನಿಂದ ಕೆಳಕ್ಕೆ**

1. ಅಲ್ಲಿನ ಕೆಲಸಗಳನ್ನೆಲ್ಲ ಭಸ್ಮ ಮಾಡಿತು ಭಾರೀ ಬೆಂಕಿ 3
2. ಪಕ್ಕದಲ್ಲೇ ಇಟ್ಟಿದ್ದ ಹಣದ ಚೀಲವನ್ನು ಬದಲಿಸಿ ವಂಚಿಸಿದ ಮೋಸಗಾರ 3
3. ಹೊಳಪು ಬಹಳ ಇದೆ. ಆದರೂ ಅದೇನೂ ಹೊಸದಲ್ಲ 3
5. ಸುತನಿಗೆಂದು ಆಕೆ ಕೊಂಡೊಯ್ದದ್ದು ನಾನಾ ವಿಧ ತಿಂಡಿ 3
7. ಕಾರ್ಯಕ್ರಮ ತಡವಾಯಿತೆಂದು ಆತಂಕದ ಎದೆ ಬಡಿತ 3
8. ಗದ್ದಲು ಹಿಡಿಯಲು ಆರಂಭವಾದದ್ದಕ್ಕೇ ಇಂಥ ಭಯವೇ? 3
9. ಆದಿಯಿಂದಲೇ ಆಕೆಗೆ ದೊರಕುತ್ತಿದೆ ವರಮಾನ 3
10. ಸುಮ್ಮ ಸುಮ್ಮನೇ ಆಕೆಗೆ ಏನಿಂಥ ಹಿಗ್ಗು? 3
12. ಕಾಡಿನ ಮಹಿಮೆಗಳನ್ನು ಎಷ್ಟು ಹೇಳಿದರೂ ಹೆಚ್ಚಿಲ್ಲ 3
14. ಜ್ವರ. ಮತ್ತೆ ಜ್ವರ. ಹಾಗೆ ಬಂದು ಬಂದು ಸಂಪೂರ್ಣ ಭಗ್ನ 3
15. ಆ ವಸ್ತುವಿನ ಅಗಲ ಅಳೆಯಲು ಒಂದು ಅಡಿಯ ಹನ್ನೆರಡರ ಒಂದಂಶ ಸಾಕು 3
16. ಅನ್ಯರ ಕಾರ್ಯಕ್ಕೆಂದು ಕರೆದರೆ ಆತ ಇಲ್ಲವೆನ್ನುತ್ತಾನೆ 3

---

## 20–02–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಭ್ಯಜನ 3. ವಿಳಂಬ 4. ವರ್ತನೆ 6. ವನಚರ 7. ರಿಷಿಪುತ್ರ 9. ರಾಮನಾಮ 12. ಪರವಶ 14. ತ್ವರಿತ 15. ಕ್ರಮಣ 16. ರಮ್ಯಧಾಮ

**ಮೇಲಿನಿಂದ ಕೆಳಕ್ಕೆ**

1. ಸಬಕಾರ 2. ನವನಾರಿ 3. ವಿಮಾನ 5. ವಸುಂಧರಾ 6. ನೆನಪು 8. ತ್ರಯೋದಶ 10. ಮಹತ್ವ 11. ಮತಾಂತರ 12. ಪರಾಕ್ರಮ 13. ವರುಣ


ಪ್ರಶ್ನಾಂಕಣ

# ಬಿಸಿ ಏರುತ್ತಿದೆ ಕಡಲು; ಏನೇನು ಅಳಲು?

ಕಡಲಿನಾವಾರ ಭೂ ಮೇಲ್ಮೈನ ಶೇಕಡ 71ರಷ್ಟು ವಿಸ್ತಾರವನ್ನು ಆವರಿಸಿರುವ ಈ ಕ್ಷಾರ ಜಲಾವಾರ (ಚಿತ್ರ 1, 3) ಲಕ್ಷಾಂತರ ಪ್ರಭೇದಗಳ ಜೀವಿಗಳ ಬದುಕಿನಾವಾರ ಕೂಡ. ಭೂಮಿಯ ಸ್ವಾಸ್ಥ್ಯದಲ್ಲಿ ಸಾಗರಾವಾರದ ಪಾತ್ರ ವಿಪರೀತ. ಆದರೆ, ಪ್ರಸ್ತುತ ಪಾರಾವಾರದ ಸ್ವಾಸ್ಥ್ಯವೇ ಹದಗೆಡುತ್ತಿರುವುದು ಸ್ಪಷ್ಟ. ಅದಕ್ಕೆ ಒಂದು ಪ್ರಧಾನ ಕಾರಣ ಕಡಲ ನೀರಿನ ತಾಪಮಾನದಲ್ಲಾಗುತ್ತಿರುವ ನಿರಂತರ ಏರಿಕೆ. ಅಂಕಿ ಅಂಶಗಳಲ್ಲಿ ಹೇಳುವುದಾದರೆ ಸಾಗರಗಳ ಮೇಲ್ಮೈಯ ನೀರಿನ ಸರಾಸರಿ ತಾಪಮಾನ 2016ರಲ್ಲಿ 20.61 ಡಿಗ್ರಿ ಸೆಂಟಿಗ್ರೇಡ್ ಇತ್ತು. 2023ರಲ್ಲಿ ಇದೇ ಉಷ್ಣತೆ 20.80 ಡಿಗ್ರಿ ತಲುಪಿತ್ತು; ಕಳೆದ ವರ್ಷ 2024ರಲ್ಲಿ ಈ ತಾಪಮಾನ 20.87 ಡಿಗ್ರಿ ಮುಟ್ಟಿತ್ತು. ಇದೇ ರೀತಿ ಮುಂದುವರೆದರೆ ಇಸವಿ 2050ರ ವೇಳೆಗೆ ಸಾಗರಗಳ ಮೇಲ್ಮೈಯ ನೀರಿನ ತಾಪಮಾನ ಪ್ರಸ್ತುತಕ್ಕಿಂತ 1.5 ಡಿಗ್ರಿ, 2100ರ ವೇಳೆಗೆ 4 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಏರುವುದು ನಿಶ್ಚಿತ!

ಸಾಗರಗಳ ನೀರಿನ ತಾಪದ ಈ ಹೆಚ್ಚಳಕ್ಕೆ ಮಾನವರ ಚಟುವಟಿಕೆಗಳಿಂದ ವಾಯುಮಂಡಲಕ್ಕೆ ಬೆರೆಯುತ್ತಿರುವ ಹಸಿರು ಮನೆ ಅನಿಲಗಳೇ ಕಾರಣ. ಈ ಅನಿಲಗಳು ಭೂ ವಾಯುಮಂಡಲದ ತಾಪವನ್ನು ಏರಿಸುತ್ತವೆ; ಹಾಗೆ ಏರಿಕೆಯಾಗುವ ಉಷ್ಣತೆಯ ಶೇಕಡ 90 ಭಾಗವನ್ನು ಕಡಲುಗಳೇ ಹೀರಿಕೊಳ್ಳುತ್ತವೆ; ಸಾಗರಗಳ ನೀರಿನ ತಾಪ ಏರುತ್ತದೆ. ಇದು ಬಹಳ ಆತಂಕಕಾರೀ ಸಂಗತಿ. ಏಕೆಂದರೆ

- ಕಡಲ ನೀರು ಹೆಚ್ಚು ಹೆಚ್ಚು ಬೆಚ್ಚಗಾದಂತೆ ಕಡಲ ನೀರಿನ ಸಂಪರ್ಕದಲ್ಲಿರುವ ಹಿಮ ಸಾಮ್ರಾಜ್ಯಗಳೆಲ್ಲ ಕರಗತೊಡಗುತ್ತವೆ; ಹಿಮನದಿಗಳ ಮೂಲಕ ಈ ನೀರೆಲ್ಲ ಕಡಲಿಗೆ ಸೇರುತ್ತವೆ. ಪರಿಣಾಮವಾಗಿ ಸಾಗರ ಮಟ್ಟವೇ ಏರಿ ಕಡಲಂಚಿನ ಪ್ರದೇಶಗಳೆಲ್ಲ, ಅಲ್ಲಿನ ಮಹಾನಗರಗಳೂ ಸೇರಿದಂತೆ, ನೀರಿನಲ್ಲಿ ಮುಳುಗುತ್ತವೆ.
- ಸಾಗರಗಳ ನೀರಿನ ತಾಪ ಏರಿದಂತೆಲ್ಲ ಧರೆಯ ಹವಾಗುಣವೂ ಬದಲಾಗುತ್ತದೆ. ಮಳೆ ಪ್ರಮಾಣ ತುಂಬ ಹೆಚ್ಚುತ್ತದೆ; ಅಧಿಕಾಧಿಕ ಸಂಖ್ಯೆಯ ಹೆಚ್ಚು ಉಗ್ರ, ವಿನಾಶಕರ ಚಂಡಮಾರುತಗಳು ಮೈದಳೆಯುತ್ತವೆ!
- ಕಡಲಿನ ನೀರಿನ ಉಷ್ಣತೆ ಹೆಚ್ಚಿದಂತೆ ಸಾಗರಗಳ ಉಷ್ಣೋದಕ ಮತ್ತು ಶೀತೋದಕ ಪ್ರವಾಹಗಳು ಏಳುಬೀಳಾಗುತ್ತವೆ. ಹಾಗಾಗಿ ಕಡಲ ಮೇಲ್ಮೈಯಲ್ಲಿ ಪೋಷಕಾಂಶಗಳ ಲಭ್ಯತೆಯೂ ಕ್ಷೀಣಿಸುತ್ತದೆ; ಅದನ್ನು ಅವಲಂಬಿಸಿದ ಮತ್ಸ್ಯಗಳು ಮತ್ತಿತರ ಲಕ್ಷಾಂತರ ಜೀವಿ ಪ್ರಭೇದಗಳು ಅಪಾಯಕ್ಕೆ ಸಿಲುಕುತ್ತವೆ.




- ಕಡಲಿನ ಮೇಲ್ಮೈ ಜಲದ ತಾಪಮಾನ ಕಿಂಚಿತ್ ಹೆಚ್ಚಿದರೂ ಹವಳ ಸಾಮ್ರಾಜ್ಯಗಳು (ಚಿತ್ರ 2) ಅಧ್ವಾನಕ್ಕೆ ಒಳಗಾಗುತ್ತವೆ. ಹವಳಗಳನ್ನು ಆಶ್ರಯಿಸಿ ಬೆಳೆವ ವರ್ಣಮಯ ಶೈವಲಗಳೆಲ್ಲ ಮೃತಗೊಳ್ಳುತ್ತವೆ. ಹವಳದ ದಿಬ್ಬಗಳಲ್ಲಿ ಈ ಶೈವಲಗಳಿಂದಲೇ ಆರಂಭಗೊಳ್ಳುವ ಸಾವಿರಾರು ಆಹಾರ ಸರಪಳಿಗಳು ಧ್ವಂಸಗೊಳ್ಳುತ್ತವೆ. ಎಷ್ಟೆಲ್ಲ ತಳಮಳ!

■ ಎನ್. ವಾಸುದೇವ್